ಮೂಲ ದಾವಾ ಸಂಖ್ಯೆ. 180/2016 ಪಿ ಡಬ್ಲ್ಯೂ 1

(ದಿನಾಂಕ 13-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಕೆ ಜಿ ವಕೀಲರಿಂದಃ-

ನಮ್ಮ ತಾಯಿಯವರು ಈಗ ಸುಮಾರು 30 ವರ್ಷದ ಹಿಂದೆ ಮೌತಿಯಾಗಿರುತ್ತಾರೆ ನಿಖರವಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನಮ್ಮ ತಾಯಿ ಮರಣದ ನಂತರ ಮಾರಾಟವಾದ ಜಮೀನುಗಳನ್ನು ಹೊರತುಪಡಿಸಿ ಉಳಿದ ಜಮೀನುಗಳ ಮ್ಯುಟೇಶನ್ ನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆಂದರೆ ಸರಿ. ನನ್ನ ತಾಯಿ ಮರಣವಾದ 4-5 ವರ್ಷದ ನಂತರ ನಾನು ಸದರಿ ಮ್ಯುಟೇಶನ್ ನ್ನು ಮಾಡಿಸಿಕೊಂಡಿರುತ್ತೇನೆ. ಅವತ್ತಿಗೆ ಪ್ರತಿವಾದಿಯರು ದಾವಾ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರು ಇತ್ತಿತ್ತಲಾಗೆ ಮನೆ ಕಟ್ಟಿಕೊಂಡಿದ್ದಾರೆನ್ನುತ್ತಾರೆ.

ದಾವಾ ಸ್ವತ್ತು 1 ಎಕರೆ 3 ಸೆಂಟ್ಸ ಜಮೀನಿನಲ್ಲಿ ಯಾರ್ಯಾರು ಒತ್ತುವರಿ ಮಾಡಿರುತ್ತಾರೆನ್ನುವ ಬಗ್ಗೆ ನಾನು ಸರ್ವೆ ಮಾಡಿಸಿ ವರದಿಯನ್ನು ಹಾಜರುಪಡಿಸಿರುತ್ತೇನೆ. 59 ಸೆಂಟ್ಸ ಜಮೀನನ್ನು ಹೊರತುಪಡಿಸಿ 5 ಎಕರೆ 80 ಸೆಂಟ್ಸ ಜಮೀನಿನಲ್ಲಿ ನಾವು ಯಾವುದೇ ಬೆಳೆಯನ್ನು ಬೆಳೆಯುತ್ತಿಲ್ಲವೆಂದರೆ ಸರಿಯಲ್ಲ. ಸುಮಾರು 40-50 ವರ್ಷದಿಂದ ಸದರಿ ಜಮೀನಿನಲ್ಲಿ ನಾವು ಯಾವುದೇ ಬೆಳೆಯನ್ನು ಬೆಳೆದಿಲ್ಲವೆಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾನು ಸದರಿ 5 ಎಕರೆ 80 ಸೆಂಟ್ಸ ಜಮೀನಿನಲ್ಲಿ ಬೇರೆ ಬೇರೆಯವರಿಗೆ ಮಾರಾಟ ಮಾಡಿರುವುದರಿಂದ ಅದವು ಖಾಲಿ ಜಾಗೆಯಾಗಿ ಉಳಿದಿದ್ದು ಅದರಲ್ಲಿ ಯಾವುದೇ ಬೆಳೆ ಬೆಳೆದಿಲ್ಲವೆಂದರೆ ಸರಿಯಲ್ಲ.

ನನ್ನ ತಾಯಿ ಗಿರಿಯಮ್ಮ ಇವರಿಗೆ ಜಮೀನು ಮಾರಾಟ ಮಾಡಿರುವುದು ನನಗೆ ಗೊತ್ತು. ಗಿರಿಯಮ್ಮ ಇವರಿಗೆ 1 ಎಕರೆ ಜಮೀನನ್ನು ಮಾರಿದ್ದಾರೆ. ಸದರಿ ಮಾರಾಟದ ಖರೀದಿ ಪತ್ರದಲ್ಲಿ ಸದರಿ 1 ಎಕರೆ ಜಮೀನಿನ ಚಕ್ಕುಬಂದಿಯನ್ನು ಖಾಲಿ ಜಾಗ ಅಂತಾ ತೋರಿಸಿರುತ್ತಾರೆಂದರೆ ಸರಿಯಲ್ಲ. ಕಡ್ಲೆವ್ವ ಇವರಿಗೆ ಮಾರಾಟ ಮಾಡಿರುವ ಜಮೀನಿನ ಖರೀದಿ ಪತ್ರದಲ್ಲಿ ಚಕ್ಕುಬಂದಿಯನ್ನು ಖಾಲಿ ಜಾಗ ಅಂತಾ ಬರೆಸಿದ್ದು ಇದೆ ಎಂದರೆ ಸರಿಯಲ್ಲ. ಅದೇ ರೀತಿ ಕೊಟ್ರಗೌಡ ಇವರಿಗೆ ಮಾರಾಟ ಮಾಡಿದ ಜಮೀನಿನ ಖರೀದಿ ಪತ್ರದಲ್ಲಿಯೂ ಸಹಾ ಬಯಲು ಜಾಗ ಅಂತಾ ಬರೆಸಿದ್ದು ಇದೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ತಾಯಿಯವರು ಸನ್ 1971 ರಲ್ಲಿ ಮಾರಾಟ ಮಾಡಿದ ಜಮೀನಿನ ಚಕ್ಕುಬಂದಿಯಲ್ಲಿ ಮನೆ ಮತ್ತು ಖಾಲಿ ಜಾಗ ಅಂತಾ

ಬರೆಸಿದ್ದು ಇದೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ. 264 ರಲ್ಲಿ 1 ಎಕರೆ ಜಮೀನನ್ನು ಕೊಟ್ರಮ್ಮ ಇವರಿಗೆ ಮತ್ತು 1 ಎಕರೆ ಜಮೀನನ್ನು ಬಸಲಿಂಗಪ್ಪ ಇವರಿಗೆ ಮಾರಾಟ ಮಾಡಿದ್ದೇನೆ ಹಾಗೂ 1 ಎಕರೆ ಜಮೀನನ್ನು ಶೀನಪ್ಪ ಇವರಿಗೆ ಮಾರಾಟ ಮಾಡಿದ್ದೇನೆ. ಸದರಿ ಮೇಲ್ಕಂಡ ಸರ್ವೆ ನಂಬರಿನಲ್ಲಿ ನಮ್ಮ ತಾಯಿ ಮತ್ತು ನಾನು ಮಾರಾಟ ಮಾಡಿ ಉಳಿದ ಜಮೀನು ಬರೀ 59 ಸೆಂಟ್ಸ ಉಳಿದಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು 1 ವರೆ ಎಕರೆ ಇದೆ ಎನ್ನುತ್ತಾರೆ.

ದಾವಾಸ್ತಿಯಲ್ಲಿ ಯಾರ್ಯಾರು ಮನೆಯನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು 20 ಜನ ಮನೆಯನ್ನು ಕಟ್ಟಿಕೊಂಡಿರಬಹುದು ಎನ್ನುತ್ತಾರೆ. ಸದರಿ 20 ಜನರು ಎಷ್ಟೆಷ್ಟು ವಿಸ್ತೀರ್ಣದ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆಂದು ಹೇಳಲು ಬರುವುದಿಲ್ಲ. ಸರ್ವೆ ನಂ.264 ಬಿ1 ಬಿ ರ ಜಮೀನಿನಲ್ಲಿ ಪ್ರತಿವಾದಿಯ ತಂದೆ ನನ್ನ ತಾಯಿಯಿಂದ 76 )( 48 ಮಳ ಜಾಗವನ್ನು ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ಜಾಗದಲ್ಲಿ ಕೊಟ್ರಗೌಡ, ರುದ್ರಮ್ಮ, ಪ್ರತಿವಾದಿ ಮತ್ತು ಗವಿಸಿದ್ದಪ್ಪ ಇವರ ಮನೆಗಳು ಹಾಗೂ ಒಂದು ಖಾಲಿ ಜಾಗ ಇದೆ ಎಂದರೆ ಸರಿ.

ಈ ದಾವೆಯಲ್ಲಿಯ ದಾವಾಸ್ತಿಯ ವಿಸ್ತೀರ್ಣ ಪೂ-ಪ ಮತ್ತು ಉ-ದ ಎಷ್ಟು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಈ ದಾವೆಯನ್ನು ನಾನು ಕೊಟ್ರಗೌಡ ಮತ್ತು ಗವಿಸಿದ್ದಪ್ಪ ಇವರ ವಿರುದ್ಧ ದಾಖಲಿಸಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಗುರುಸಿದ್ದಪ್ಪ ಎರಡು ಮನೆಗಳನ್ನು ಮತ್ತು ಗುರುಸಿದ್ಧಯ್ಯ ಒಂದು ಮನೆಯನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿ. ಸದರಿಯವರ ಮನೆಗಳ ಮುಂದೆ ಸುಮಾರು 40 ವರ್ಷದ ತೆಂಗಿನ ಗಿಡಗಳು ಬೆಳೆದಿರುತ್ತವೆಂದರೆ ಸಾಕ್ಷಿಯು 20 ವರ್ಷದ ತೆಂಗಿನ ಗಿಡಗಳು ಬೆಳೆದಿರುತ್ತವೆನ್ನುತ್ತಾರೆ. ಗುರುಸಿದ್ದಪ್ಪ ಮತ್ತು ಗುರುಸಿದ್ಧಯ್ಯ ಇವರು ಸುಮಾರು 40 ವರ್ಷದ ಹಿಂದೆ ದಾವಾ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುತ್ತಾರೆಂದರೆ ಸಾಕ್ಷಿಯು 7-8 ವರ್ಷದಿಂದ ಕಟ್ಟಿಕೊಂಡಿರುತ್ತಾರೆನ್ನುತ್ತಾರೆ. ಸದರಿಯವರ ಮನೆಯ ಮುಂದೆ ಸುಮಾರು 40 ವರ್ಷದ ತೆಂಗಿನ ಗಿಡಗಳು ಬೆಳೆದಿರುತ್ತವೆಂದರೆ ಸಾಕ್ಷಿಯು 10-12 ವರ್ಷದ ಗಿಡಗಳು ಬೆಳೆದಿರುತ್ತವೆನ್ನುತ್ತಾರೆ. ಸದರಿ ತೆಂಗಿನ ಗಿಡದಲ್ಲಿ ಬರುವ ಫಸಲನ್ನು ಸದರಿಯವರು ತೆಗೆದುಕೊಳುತ್ತಾ ಬಂದಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆ ಗಿಡಗಳು ಕಾಯಿ ಬಿಡುವುದಿಲ್ಲವೆನ್ನುತ್ತಾರೆ.

ಶಿವಮೂರ್ತಿ, ಗುರುಸಿದ್ದಪ್ಪ, ಗುರುಸಿದ್ದಯ್ಯ, ವಂಟೆಗೋಡಿ ವೀರಣ್ಣ, ಕೋಗಳಿ ರುದ್ರಮ್ಮ, ಕೊಟ್ರಗೌಡ, ಗವಿಸಿದ್ದಪ್ಪ ಇವರು ಖರೀದಿಪತ್ರಗಳ ಆಧಾರದ ಮೇಲೆ ಮ್ಯುಟೇಶನ್ ಬದಲಾವಣೆಗಾಗಿ ಅರ್ಜಿ ನೀಡಿದ್ದರೆಂದರೆ ನನಗೆ ಗೊತ್ತಿಲ್ಲ. ಆ ಕುರಿತು ಕಂದಾಯ

ನ್ಯಾಯಾಲಯದಲ್ಲಿ ಪ್ರಕರಣ ಸಹಾ ನಡೆದು ಅದರಲ್ಲಿ ನಾನೂ ಸಹಾ ಹಾಜರಾಗಿದ್ದೆ ಎಂದರೆ ಸರಿಯಲ್ಲ. ತಹಶೀಲ್ದಾರ್ ನ್ಯಾಯಾಲಯದಲ್ಲಿ ಹಿಂಬರಹ ನೀಡಿದ ಮೇಲೆ ಸದರಿಯವರು ಎ ಸಿ ನ್ಯಾಯಾಲಯದಲ್ಲಿ ಒಂದು ಮೇಲ್ಮನವಿ ದಾಖಲಿಸಿದ್ದರು ಎಂದರೆ ಸುಳ್ಳು. ನಾನು ಎ ಸಿ ನ್ಯಾಯಾಲಯದ ಪ್ರಕರಣ ನಂ.49/2016-17 ರಲ್ಲಿ ನಮ್ಮ ವಕೀಲರ ಮೂಲಕ ಹಾಜರಾಗಿರುತ್ತೇನೆಂದರೆ ಸರಿ. ಎ ಸಿ ನ್ಯಾಯಾಲಯದ ಆದೇಶದಂತೆ ದಾವಾಸ್ತಿಯಲ್ಲಿ ಮನೆ ಕಟ್ಟಿಕೊಂಡಿರುವ ಬಗ್ಗೆ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿರುತ್ತಾರೆಂದರೆ ಸರಿ. ಸದರಿಯವರು ಸ್ಥಳ ಪರಿಶೀಲನೆ ಮಾಡಿ ಸನ್ 1971 ರಿಂದ ದಾವಾ ಜಮೀನಿನಲ್ಲಿ ಖರೀದಿದಾರರು ಮನೆಯನ್ನು ಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾರಂತಾ ಎ ಸಿ ನ್ಯಾಯಾಲಯಕ್ಕೆ ವರದಿ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ವರದಿಗೆ ನನ್ನದು ತಕರಾರಿಲ್ಲ ಅಂತಾ ನಾನು ಎ ಸಿ ನ್ಯಾಯಾಲಯದಲ್ಲಿ ತಿಳಿಸಿರುತ್ತೇನೆಂದರೆ ಸರಿಯಲ್ಲ. ಖರೀದಿದಾರರು ಖರೀದಿ ಪತ್ರದ ಆಧಾರದ ಮೇಲೆ ತಮ್ಮ ಆಸ್ತಿಗಳ ಮೇಲೆ ಪಂಚಾಯ್ತಿಯಲ್ಲಿ ನಮೂನೆ-10 ನ್ನು ಹಾಗೂ ಅದಕ್ಕೆ ಡೋರ್ ನಂಬರನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ಸದರಿ ನಮೂನೆ-10 ಪಡೆದಿರುವ ಬಗ್ಗೆ ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಆ ರೀತಿ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕೋಗಳಿ ರುದ್ರಮ್ಮ ಮತ್ತು ಕೋಗಳಿ ಕೊಟ್ರಗೌಡ ಇವರ ಖರೀದಿ ಪತ್ರಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಇಲ್ಲ. ಸದರಿಯವರು ಮನೆಯನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿ. ಸದರಿಯವರು ಮನೆ ಕಟ್ಟುವ ಸಮಯದಲ್ಲಿ ಏಕೆ ಮನೆಯನ್ನು ಕಟ್ಟುತ್ತಿದ್ದೀರಿ ಅಂತಾ ಪ್ರಶ್ನಿಸಿ ನಾನು ಸಂಬಂಧಿಸಿದ ಇಲಾಖೆಗೆ ದೂರನ್ನು ಸಹಾ ಅವರ ವಿರುದ್ಧ ನೀಡಿರುತ್ತೇನೆ. ಸನ್ 2011 ರಲ್ಲಿ ಸದರಿಯವರು ಮನೆಯನ್ನು ಕಟ್ಟಿಕೊಂಡು ಅಲ್ಲೇ ವಾಸವಾಗಿರುತ್ತಾರೆ ಅವರು ಮನೆ ಕಟ್ಟುವ ಸಮಯದಲ್ಲಿ ನಾನು ಅವರಿಗೆ ತಡೆದಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಖರೀದಿಯಾಗಿದೆ ಎಂದು ಹೇಳಿದ್ದಾರೆನ್ನುತ್ತಾರೆ. ಸದರಿಯವರು ಚನ್ನಪ್ಪ ಇವರ ಕಡೆಯಿಂದ ನಾವು ಖರೀದಿ ಮಾಡಿದ್ದೇವೆಂದು ತಿಳಿಸಿದ್ದಾರೆ. ನನ್ನ ತಾಯಿಯವರು ವಂಟಿಗೋಡಿ ರುದ್ರಪ್ಪ ಇವರಿಗೆ ಮಾರಾಟ ಮಾಡಿದ್ದರಿಂದ ನೀವು ಅವರಿಗೆ ಮನೆ ಕಟ್ಟುವ ಸಮಯದಲ್ಲಿ ಪ್ರಶ್ನೆ ಮಾಡಿಲ್ಲವೆಂದರೆ ಸರಿಯಲ್ಲ.

1 ಎಕರೆ 3 ಸೆಂಟ್ಸ ಜಮೀನಿಗೆ ಸಂಬಂಧಿಸಿದಂತೆ ಸರ್ವೆ ವರದಿಯಾಧಾರದ ಮೇಲೆ ನೀವು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲವೆಂದರೆ ಸರಿಯಲ್ಲ. ಸನ್ 1995-96 ನೇ ಇಸ್ವಿಯಲ್ಲಿ 1 ಎಕರೆ ಜಮೀನು ಹೊರತುಪಡಿಸಿ ಉಳಿದ ಜಮೀನು ನನ್ನ ತಾಯಿ ಹೆಸರಿನಲ್ಲಿತ್ತು. ಆ

ಮೂಲ ದಾವಾ ಸಂಖ್ಯೆ. 180/2016 ಪಿ ಡಬ್ಲ್ಯೂ 1

ಸಮಯದಲ್ಲಿ ನಾನು ಒಟ್ಟು 6 ಎಕರೆ 39 ಸೆಂಟ್ಸ ಜಮೀನಿನ ಇ ಸಿ ಯನ್ನು ಪಡೆದು ಮ್ಯುಟೆನಶ್ ಗಾಗಿ ಅರ್ಜಿ ನೀಡಿದ್ದೇನೆಂದರೆ ನನಗೆ ನೆನಪಿಲ್ಲ. ಸನ್ 1996 ರಲ್ಲಿ ಇ ಸಿ ಪಡೆದಾಗ ಸನ್ 1971 ರಂದು ನನ್ನ ತಾಯಿ ಜಮೀನು ಮಾರಾಟ ಮಾಡಿರುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಸನ್ 1995-96 ನೇ ಸಾಲಿನಿಂದ ಪ್ರತಿವಾದಿ ಮತ್ತು ಉಳಿದ ಖರೀದಿದಾರರು ದಾವಾಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರು ಎಂದರೆ ಸರಿ. ಸನ್ 1995-96 ನೇ ಸಾಲಿನಲ್ಲಿ ಪ್ರತಿವಾದಿ ಮತ್ತು ಉಳಿದ ಖರೀದಿದಾರರು ಮನೆ ಕಟ್ಟಿಕೊಂಡಿದ್ದು ಯಾವ ಆಧಾರದ ಮೇಲೆ ಅವರು ಮನೆ ಕಟ್ಟಿಕೊಂಡಿದ್ದಾರಂತಾ ನೀವು ಪರಿಶೀಲನೆ ಮಾಡಿದ್ರಾ ಎಂದರೆ ಸಾಕ್ಷಿಯು ಅವರು ನನಗೆ ನಮ್ಮ ತಾಯಿ ಖರೀದಿ ಮಾಡಿಕೊಟ್ಟಿದ್ರು ಅಂತಾ ತಿಳಿಸಿದ್ರು ನಂತರ ನಾನು ದಾಖಲೆಯನ್ನು ತೆಗೆಸಿ ನೋಡಿರುತ್ತೇನೆ ಎನ್ನುತ್ತಾರೆ.

ಸದರಿ ಆಸ್ತಿಯು ನನ್ನ ತಾಯಿಗೆ ಅವರ ತಾಯಿಯಿಂದ ಬಂದ ಆಸ್ತಿಯಾಗಿದ್ದು ಅದನ್ನು ಅವರು ಮಾರಾಟ ಮಾಡಲು ಸಂಪೂರ್ಣ ಹಕ್ಕುದಾರರು ಇರುತ್ತಾರಂತಾ ಗೊತ್ತಿದ್ದರಿಂದ ಸನ್ 1995-96 ರಿಂದ ಸುಮ್ಮನಿದ್ದು ಸನ್ 2016 ರಲ್ಲಿ ನಾನು ಸುಳ್ಳು ದಾವೆಯನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನಗೆ ಪರಿಹಾರ ಕೇಳಲು ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ನನ್ನ ತಾಯಿ ಬೇರೆ ಬೇರೆ ಜನರಿಗೆ ಮಾರಾಟ ಮಾಡಿರುತ್ತಾಳೆ ಆದ್ದರಿಂದ ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಮ್ಯುಟೇಶನ್ ಮಾಡಿಕೊಳ್ಳಲು ನನಗೆ ಯಾವುದೇ ಅಧಿಕಾರ ಇಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾನು ಸನ್ 1971 ರಿಂದ ನಾನು ಸ್ವಾಧೀನದಲ್ಲಿಲ್ಲ ನನಗೆ ದಾವಾಸ್ತಿಯ ಮೇಲೆ ಯಾವುದೇ ಅಧಿಕಾರ ಇಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ